ಭರದಲ್ಲಿ ಬಿದ್ದು ಮಂಡಿ ಕೆತ್ತಿ ಮುಸುಡಿ ಒಡೆದದ್ದು; ಆ ನೋವಿನೊಟ್ಟಿಗೆ ಸಾಂತ್ವನದ ಬದಲು ಸಿಕ್ಕ ಅಮ್ಮನ ಬೈಗುಳ; ಮಳೆಯಲ್ಲಿ ನೆನೆದದ್ದು; ಸಂಗೀತ ಕಲಿಯುವಾಗ ಬಸ್ಸಲ್ಲಿ ಹೋಗದೇ ನಡೆದೇಹೋಗಿ ಉಳಿಸಿದ ಹತ್ತು ಪೈಸೆ ಬಸ್‌ಚಾರ್ಜಿನಲ್ಲಿ ಕಾಯಿಬೆಲ್ಲದ ಗಟ್ಟಿ ಚಾಕೊಲೇಟನ್ನು ಗಲ್ಲದಲ್ಲಿಟ್ಟುಕೊಂಡು ರಸ ಹೀರುತ್ತಾ ಹರಟುತ್ತಾ ನಡೆದದ್ದು; ಲಗೋರಿ, ಗೋಲ್ಡನ್‌ಪ್ಲೇ, ಸ್ಕಿಪ್ಪಿಂಗು, ರಿಂಗು, ಡಾಂಕಿ ಮುಂತಾದ ಆಟವಾಡುತ್ತಿದ್ದಾಗಿನ ಮಜ... ಎಲ್ಲರೂ ಸೇರಿ ಮಾಡಿದ 'ಸಗ್ಗದ ಸಿರಿ ಬಂತು ನಮ್ಮೂರಿಗೆ' ಜಾನಪದ ನೃತ್ಯ... ಮುಂತಾದ ಸವಿನೆನಪುಗಳನ್ನು ರಿವೈಂಡ್ ಮಾಡಿ ತಾಜಾತನದ ಅಲೆಯಲ್ಲಿ ತೇಲುತ್ತಾ ಮತ್ತೆ ಬಾಲ್ಯಕ್ಕೆ ಜಾರಿ ಸಂತಸದಿಂದ ಹರಟುತ್ತಿದ್ದುದಕ್ಕೆ ಎಲ್ಲೆಯಿರಲಿಲ್ಲ.

ಅಷ್ಟರಲ್ಲಿ ಮೀರಿ ಉದ್ಗರಿಸಿದ್ದಳು 'ಅಲ್ವೇ ಲತೀ...! ತಲೆಗೆಕೊರ್ಂಡು ಕೂದಲು ಒಣಗಿಸೋಕಂತ ಟೆರೇಸಿನ ಮೇಲೇರಿ ಬಿಸಿಲಲ್ಲಿ ನಿಲ್ತಿದ್ಯಲ್ಲೇ... ರೇಷ್ಮೆಯಂತೆ ಹೊಳೆಯೋ ಸ್ಟ್ರೇಟಾಗಿರೋ ಉದ್ದ ಕೂದ್ಲು ನೋಡಿ ಎಷ್ಟು ಹೊಟ್ಟೆಕಿಚ್ಚಾಗ್ತಿತ್ತು ಗೊತ್ತೇನೇ...' ಅವಳಂದದ್ದು ಕೇಳಿ ಸದ್ಯದ ನಾಲ್ಕು ಕೂದಲಿನ ದುಸ್ಥಿತಿ ಮರೆತಂತಾಗಿ ಆಗ ನನಗೂ ಉದ್ದನೆಯ ಚೆಂದದ ಕೇಶರಾಶಿಯಿತ್ತೆಂಬ ನೆನಪೇ ಹಿತವೆನ್ನಿಸಿತ್ತು.

ಈಗಿನವರು ಪಾರ್ಲರಿಗೆ ದುಡ್ಡು ಸುರಿದು ಕೂದಲನ್ನು ಪೊರಕೆಯಂತೆ ನೆಟ್ಟಗೆ ಮಾಡಿಸಿಕೊಳ್ಳುವುದಕ್ಕಿಂತಲೂ ಚೆಂದದ ನೇರ, ದಟ್ಟ ಕೇಶದ ಒಡತಿ ನಾನಾಗಿದ್ದೆ. ನೇರ ಮಾಡಿಸಿಕೊಂಡು ಮೇಂಟೆನೆನ್ಸಿಗೂ ದುಡ್ಡು ಸುರಿಯೋ ದರ್ದು ಇಂದಿನವರದ್ದಾದರೆ ನನ್ನ ಕೇಶಕ್ಕದಾವುದೂ ಬೇಕಿರಲಿಲ್ಲ, ನೈಸರ್ಗಿಕವಾಗಿಯೇ ನೇರ ದಿಟ್ಟ ನಿರಂತರವಾಗಿತ್ತು!

***

ಗೆಳತಿಯ ಹೊಗಳುವಿಕೆ ಸಾರ್ಥಕ್ಯಭಾವ ಮೂಡಿಸಿ ಅಳಿದುಳಿದ ಕೇಶವನ್ನು ರಾಶಿಯಾಗಿಸಲು ಹಮ್ಮಿಕೊಂಡ ಕಸರತ್ತು ಸ್ಮೃತಿಪಟಲದಲ್ಲಿ ಸ್ಲೈಡಿನಂತೇ ಚಕಚಕನೆ ಮೂಡಿತ್ತು. ಯಾವುದೇ ಸಮಾರಂಭವಿರಲಿ ಆ ದಿನದಂದು ತಲೆಸ್ನಾನ ಕಡ್ಡಾಯ, ಹಾಗೆ ಮಾಡಿದಲ್ಲಿ ನಾಲ್ಕನ್ನು ಎಂಟಾಗಿಸಿದ ಭಾವ, ಭ್ರಾಂತು. ಒಣಗಿದ ಹುಲ್ಲಂತಿರುವ ಕೂದಲನ್ನು ನಾಜೂಕಾಗಿ ಬಾಚಿ ಅಲ್ಲಲ್ಲಿ ಪಿನ್ನುಗಳಿಂದ ಬಂಧಿಸಿ ಪುಗ್ಗದಂತೆ ಉಬ್ಬಿಸಿ, ಶಿಖರದಂತೆ ಎಬ್ಬಿಸಿ. ಇಲಿ ಬಾಲದಂತಿದ್ದದ್ದನ್ನು ಇಣಚಿ ಬಾಲವಾಗಿಸಲು ಹರಸಾಹಸ ನಡೆಸಿ ತಕ್ಕಮಟ್ಟಿಗೆ ಅಂದುಕೊಂಡದ್ದರಲ್ಲಿ ಜಯ ಸಾಧಿಸಿದೆನೆಂದು ತೇಲುತ್ತಾ ಸುಖಿಸುತ್ತಿದ್ದದ್ದೂ ಒಂದು ರೀತಿಯ ಭ್ರಮೆಯೇ! ಇನ್ನು ನಾನಾಗಲೇ ಹೇಳಿದಂತೆ ಬಿಳಿಗೂದಲನ್ನು ಕಪ್ಪಾಗಿಸುವ ಕಸರತ್ತನ್ನು ಹತ್ತಿರದ ಬಂಧು, ಆಪ್ತೇಷ್ಟರ ಸಮಾರಂಭಕ್ಕೆ ಮಾತ್ರ ಸೀಮಿತಗೊಳಿಸಿದ್ದೆ. ದೂರದ ಸಮಾರಂಭಗಳಿಗೆ ಈಗಿನವರ ಫ್ಯಾಷನ್ ಮಂತ್ರವಾದ 'ಸಾಲ್ಟ್ ಪೆಪ್ಪರ್' ಲುಕ್ಕಿಗೆ ನಿರ್ಭಿಡೆಯಿಂದಲೇ ಆತುಕೊಳ್ಳುತ್ತಿದ್ದೆ.

ಇಂದಿನ ಯುವಜನಾಂಗ ದುಡ್ಡು ಸುರಿದು ಕಪ್ಪುಗೂದಲಿಗೆ ಬಿಳಿ, ಕೆಂಚು, ಹಸಿರು, ಪಿಂಕು ಬಣ್ಣ ಬಳಿಸಿಕೊಂಡು ಫ್ಯಾಷನ್ನಿನ ಅಲೆಯಲ್ಲಿ ತೇಲಿದರೆ ಅವರ ಹಿಂದಿನ ತಲೆಮಾರಿನವರಾದ ನಾವು ವಯೋಸಹಜತೆಗೆ ತಕ್ಕಂತೆ ದೈವದತ್ತವಾಗಿ ಒಲಿದುಬಂದ 'ಹಂಡಬಂಡ' ಲುಕ್ಕನ್ನು ಮತ್ತೆ ದುಡ್ಡು ಸುರಿದು ಕಾರ್ಮೋಡವಾಗಿಸಲು ಹೆಣಗುತ್ತಿರುವುದಕ್ಕೇನೆನ್ನುವುದು? ಮನುಷ್ಯ ಜನ್ಮಕ್ಕೆ ತೃಪ್ತಿ ಎನ್ನುವುದೇ ಇಲ್ಲವೇನೋ. ಹ್ಞಾಂ! ಡೈ ಎಂದೊಡನೆ ನೆನಪಾಯ್ತು ನೋಡಿ... ಗುಟ್ಟು ಮಾಡ್ತಿದ್ದ ಕಾಲವೂ ಇತ್ತು. ಮೂರೂವರೆ ದಶಕದಷ್ಟು ಮೊದಲೇ ಕೂದಲಿಗೆ ಬಣ್ಣ ಹಚ್ಚಿಕೊಂಡು ನೋಡೋಕೆ ಬಂದು ನನ್ನನ್ನು ಹಳ್ಳಕ್ಕೆ... ಅಲ್ಲಪ್ಪಾ, ಖೆಡ್ಡಾಗೆ ಬೀಳಿಸಿದ ಗೌರವರ್ಣದ ವರಮಹಾಶಯರ ಚಿದಂಬರ ರಹಸ್ಯ ಮದುವೆಯಾದ ಎಷ್ಟೋ ದಿನಗಳ ನಂತರ ಅನಾವರಣಗೊಂಡಿತ್ತು. ಬಿಡಿ, ಅಕಾಲನರೆಗೆ ಅವರಾದರೂ ಏನು ಮಾಡಿಯಾರು? ಆ ಕಾಲದಲ್ಲಿ ಮುಪ್ಪಿನ ಸಂಕೇತವಾದ ಬೆಳ್ಳಿಕೂದಲನ್ನು ಪೆಪ್ಪರ್‌ಮೆಂಟು, ಚಕ್ಕುಲಿ, ಉಂಡೆಯ ಆಮಿಷ ಒಡ್ಡಿ ಮಕ್ಕಳಿಂದ ಗುಟ್ಟಾಗಿ ಬೇರು ಸಹಿತ ಕಿತ್ತೊಗೆಸುತ್ತಿದ್ದವರು ಒಂದೆಡೆಯಾದರೆ ಕಿತ್ತಿದರೆ ದ್ವಿಗುಣಗೊಳ್ಳುತ್ತದೆಂಬ ನಂಬಿಕೆಗೆ ಜೋತು ಬಿದ್ದವರು ಕಾಡಿಗೆಯನ್ನೋ ಮಸಿಯನ್ನೋ ಬಳಿದು ತಾತ್ಕಾಲಿಕ ಕಪ್ಪಾಗಿಸುವ ತಂತ್ರಗಾರಿಕೆಗೆ ಮೊರೆಹೋದದ್ದಲ್ಲದೆ ನೆತ್ತಿಗೆ ಮಾತ್ರ ಬಳಿದುಕೊಂಡು ತೃಪ್ತರಾಗುತ್ತಿದ್ದರು.

ಇನ್ನು ಕೆಲವರು ಅತೀ ಬುದ್ಧಿವಂತರಿಗೆ ಮಾತ್ರ ಅಕಾಲ ನರೆಯಾಗುವುದು ಎಂದು ಬೀಗುತ್ತಾ ಬಿದ್ದರೂ ಮೀಸೆ ಮಣ್ಣಾಗಲಿಲ್ಲವೆಂಬ ಧೋರಣೆಗೆ ಆತುಕೊಳ್ಳುತ್ತಿದ್ದರು. ಇಂದು ಅದೇ ಬಿಳಿಕಪ್ಪಿನ ಮಿಶ್ರಣದ ಕೇಶವಿನ್ಯಾಸ ಫ್ಯಾಷನ್ ಮಂತ್ರವಾದದ್ದು ಸೋಜಿಗವೇ. ಕಾಲಾಯ ತಸ್ಮೈ ನಮಃ!

ಸಂಬಂಧ, ವಸ್ತು, ವರ್ಣ, ಎತ್ತರ, ಆರೋಗ್ಯ... ಹೀಗೆ ಯಾವುದೇ ಆಗಲಿ ಅಭಾವ ಉಂಟಾದಾಗಲೇ ಅದರ ಮಹತ್ವದ ಅರಿವಾಗೋದು, ಮತ್ತದಕ್ಕಾಗಿ ಹಪಹಪಿಸೋದು ಮನುಷ್ಯ ಸಹಜಗುಣವೆಂಬ ನೀತಿ ಗೊತ್ತಿದ್ದರೂ ನನ್ನರಿವಿಗೆ ಬಂದದ್ದು ಮಾತ್ರ ಶರದೃತುವಿನಲ್ಲಿ ತರಗಲೆಗಳುದುರುವ ವೇಗದಲ್ಲಿ ಶಿರದ ಕೂದಲುದುರುದುರಿ ಬೋಳಾಗುವ ಹಂತ ತಲುಪಿದಾಗಲೇ! ಅದುವರೆಗೂ ದಟ್ಟ ನೀಳ್ಗೂದಲನ್ನು ಉಪೇಕ್ಷಿಸಿದ್ದರ ಪ್ರತಿಫಲವಾಗಿ ಬಡಿದೆಬ್ಬಿಸಿದಂತೆ ಎಚ್ಚೆತ್ತುಕೊಂಡು ಕಾರ್ಯೋನ್ಮುಖಳಾದದ್ದೂ ಆಗಿತ್ತು. ಆರೈಕೆಗೆ ಸ್ಪಂದಿಸುವ ವಯಸ್ಸು ಇದಲ್ಲವೆಂಬ ವೇದಾಂತ ಗೊತ್ತಿದ್ದರೂ ಆರೈಕೆಯಂತೂ ಜೋರಾಗಿದೆ... 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ...' ಹೆಮ್ಮೆಯ ಸಾಹಿತಿ ಗೋಪಾಲಕೃಷ್ಣ ಅಡಿಗರ ಹಾಡನ್ನು ಗುನುಗುವುದೂ ಹೆಚ್ಚಿದೆ.

ಪ್ರತಿಕ್ರಿಯಿಸಿ: **feedback@sudha.co.in**

